**6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ. 296/2018**

(ಪ್ರಾ.ಸಾ. 21/ ಜಾ.ಸಾ.20)

ತಾಃ 23-02-2022 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು : ಚಂದ್ರಪ್ಪ

ತಂದೆಯ ಹೆಸರು : ಮುನಿಯಪ್ಪ
ವಯಸ್ಸು : 55 ವರ್ಷ
ಉದ್ಯೋಗ : ವ್ಯವಸಾಯ
ವಾಸ ಸ್ಥಳ : ನೆಲವಾಗಿಲು

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನಾನು ನೆಲವಾಗಿಲಿನಲ್ಲಿ ಸುಮಾರು 50 ವರ್ಷಗಳಿಂದ ವಾಸ ಮಾಡುತ್ತಿದ್ದೇನೆ. ಕವಿತಾರವರು ನನಗೆ ಗೊತ್ತು ಸದರಿಯವರು ಈಗ ಜೀವಂತ ಇರುವುದಿಲ್ಲ, ಸದರಿ ಕವಿತಾರವರನ್ನು 4 ವರ್ಷಗಳ ಹಿಂದೆ ಯಾರೋ ಕೊಂದು ಹಾಕಿದ್ದಾರೆ ಎಂದು ಗೊತ್ತಾಯಿತು. ಕವಿತಾ ಮೃತಪಟ್ಟ ನಂತರ ಪೊಲೀಸರು ನನ್ನನ್ನು ಯಾವುದೇ ಸ್ಥಳಕ್ಕೆ ಕರೆಸಿರುವುದಿಲ್ಲ. ಕವಿತಾರವರನ್ನು ಯಾರು ಕೊಲೆ ಮಾಡಿದ್ದಾರೆ ಹಾಗೂ ಆಕೆಯನ್ನು ಯಾವ ರೀತಿ ಕೊಲೆ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ನನ್ನನ್ನು ಪೊಲೀಸರು ಯಾವುದೇ ಆಸ್ಪತ್ರೆಗೆ ಕರೆಸಿರುವುದಿಲ್ಲ. ನಾನು ಕವಿತಾರವರ ಮೃತದೇಹವನ್ನು ನೋಡಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ-**

1. ದಿನಾಂಕ 19.11.2017ರಂದು ವೈಟ್‌ಫೀಲ್ಡ್ ಕೊಲಂಬಿಯಾ ಆಸ್ಪತ್ರೆಗೆ ನನ್ನನ್ನು ಕರೆಸಿದ್ದರು ಎಂದರೆ ಸರಿಯಲ್ಲ. ಕವಿತಾರವರ ಮೃತದೇಹವನ್ನು ನೋಡಿ ನಾನು ಆಕೆ ರಮೇಶ್‌ನ ಹೆಂಡತಿ ಕವಿತಾ ಎಂದು ಗುರುತಿಸಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆ ದಿನ ನಾನು ನನ್ನ ಸ್ವಂತ ಕೆಲಸ ನಿಮಿತ್ತ ಹೆಚ್ ಕ್ರಾಸ್‌ಗೆ ಹೋದಾಗ ಕವಿತಾರವರ ಕುಟುಂಬದವರು ವೈಟ್‌ಫೀಲ್ಡ್ ಕೊಲಂಬಿಯಾ ಆಸ್ಪತ್ರೆಯಲ್ಲಿ ಇರುವುದಾಗಿ ಗೊತ್ತಾಯಿತು ಎಂದರೆ ಸರಿಯಲ್ಲ. ನನಗೆ ತಿಳಿದ ವಿಚಾರವೇನೆಂದರೆ ದಿನಾಂಕ 17.11.2017ರಂದು ಸಂಜೆ 1ನೇ ಆರೋಪಿ ನಾರಾಯಣಪ್ಪ, ವಿಜಯ್‌ಕುಮಾರ ಇತರ 3 ಜನರು ಹೆಚ್ ಕ್ರಾಸ್ ಬಳಿ ಇರುವ ಕವಿತಾ ಡಾಬಾದ ಬಳಿಗೆ ಬಂದು ಡಾಬಾದಲ್ಲಿ ಇದ್ದವರ ಮೇಲೆ ಹಲ್ಲೆ ಮಾಡಿ, ಡಾಬಾದಲ್ಲಿ ಇದ್ದ ಟಿ.ವಿ, ಫ್ರಿಡ್ಜ್ ಹಾಗೂ ಇತರೆ ಸಾಮಾನುಗಳನ್ನು ತುಂಬಿಕೊಂಡು ಹೋಗಿದ್ದು , ಈ ವಿಚಾರವನ್ನು ಡಾಬಾದಲ್ಲಿದ್ದ ಗಜೇಂದ್ರರವರು ಹೊಸಕೋಟೆಯಲ್ಲಿದ್ದ ರಮೇಶ್ ಮತ್ತು ಕವಿತಾರವರಿಗೆ ಫೋನ್ ಮಾಡಿ ತಿಳಿಸಿದ್ದು , ಸದರಿಯವರು ಡಾಬಾ ಬಳಿ ಬಂದು, ಲೋಕೇಶ್‌ರವರನ್ನು ವಿಚಾರಣೆ ಮಾಡುತ್ತಿದ್ದಾಗ ಡಾಬಾದಲ್ಲಿದ್ದ ಲೈಟ್‌ಗಳನ್ನು ಒಡೆದು ಹಾಕಿ ಆರೋಪಿತರೆಲ್ಲರೂ ಸೇರಿ ಚಾಕುವಿನಿಂದ ಕವಿತಾರವರ ಹೊಟ್ಟೆಗೆ ತಿವಿದು, ಆಕೆ ಚೀರುತ್ತಿದ್ದಾಗ ಸಹಾಯಕ್ಕಾಗಿ ರಮೇಶ್ ಬಂದಿದ್ದು, ರಮೇಶ್‌ನಿಗೂ ಸಹ ಚಾಕುವಿನಿಂದ ತಿವಿದು, ಆತನು ಸಹ ಕಿರುಚುತ್ತಿದ್ದಾಗ ಸದರಿ ಶಬ್ದವನ್ನು ಕೇಳಿ ಜನರು ಬರುವುದನ್ನು ಕಂಚು

ಸ್ಥಳದಿಂದ ಎಲ್ಲರೂ ಓಡಿ ಹೋಗಿದ್ದು , ನಂತರ ಗಾಯಾಳುಗಳನ್ನು ಸೃಷ್ಟಿ ಆಸ್ಪತ್ರೆಗೆ ಸೇರಿಸಿ ನಂತರ ವೈಟ್‌ಫೀಲ್ಡ್ ಕೊಲಂಬಿಯಾ ಆಸ್ಪತ್ರೆಗೆ ದಾಖಲಿಸಿದ್ದು ಚಿಕಿತ್ಸೆ ಫಲಕಾರಿಯಾಗದೇ ದಿನಾಂಕ 18.11.2018ರಂದು ಸಂಜೆ 4.45ಗಂಟೆಗೆ ಕವಿತಾಳು ಮೃತ ಪಟ್ಟಳು ಎಂದು ತಿಳಿಯಿತು, ಈ ವಿಚಾರವಾಗಿ ನಾನು ವೈಟ್‌ಫೀಲ್ಡ್ ಕೊಲಂಬಿಯಾ ಆಸ್ಪತ್ರೆಯಲ್ಲಿ ಕವಿತಾರವರ ಶವಪಂಚನಾಮೆ ಮಾಡುವ ಸಂದರ್ಭದಲ್ಲಿ ಹಾಜರಿದ್ದು , ಸದರಿ ವಿಚಾರವನ್ನು ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ಹೇಳಿಕೆಯನ್ನು ನೀಡಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-22 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಮ್.ಪಿ. ವಕೀಲರಿಂದ ಃ</u>**

ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

(ಚೆನ್ನಪ್ಪ ಗೌಡ)
6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.